ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯ ನಾಲೆಗಳ ಆಧುನೀಕರಣದ ಬಗ್ಗೆ

ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :-

750 (895) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯ ವಿಶ್ವೇಶ್ವರ ನಾಲೆಗಳ ಮಳವಳ್ಳಿ ತಾಲ್ಲೂಕು ಮದ್ದೂರು ತಾಲ್ಲೂಕು ಕೊನೆಯ ಭಾಗಗಳಲ್ಲಿ ನಾಲೆಗಳ ಆಧುನೀಕರಣಗಳ ಸಂಬಂಧ ಇದುವರೆವಿಗೂ ಲೈನಿಂಗ್ ಮಾಡದೆ ಇರುವ ವಿಸ್ತೀರ್ಣವೆಷ್ಟು; (ಪ್ರತ್ಯೇಕ ವಿವರ ನೀಡುವುದು)

(ಆ) ಈ ಸಂಬಂಧವಾಗಿ ಇದುವರೆವಿಗೂ ಬಿಡುಗಡೆಗೊಳಿಸಿರುವ ಅನುದಾನದ ಮೊತ್ತವೆಷ್ಟು;

(ಇ) ಉಳಿದಿರುವ ಲೈನಿಂಗ್ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ?